# ಆಹಾ ಸುದ್ದಿ!

★ ಸಸಿತೋಟ




ಸಿನಿಮಾ, ಟೀವಿ, ಫ್ಯಾಷನ್ ಷೋ ಎಂದು ಎಲ್ಲಾ ಕಡೆ ಮಹಿಳೆಯರ ನಂಗಾ ನಾಚ್ ನೋಡಿ ನೋಡಿ ಕಣ್ಣುಗಳಿಗೆ ಅಲರ್ಜಿ ಆಗಿರಬಹುದು. ಅದಕ್ಕೆಂದೇ ಆಸ್ಟ್ರಿಯಾ ರಾಜಧಾನಿ ವಿಯೆನ್ನಾದಲ್ಲಿ ಈಗ ಪುರುಷರ ನಗ್ನ ಚಿತ್ರಗಳ ಕಲಾ ಪ್ರದರ್ಶನ ನಡೆಯುತ್ತಿದೆ. ಆದರೆ ಮೊಣಕಾಲಿನವರೆಗೆ ಮರ್ಯಾದೆ ಮುಚ್ಚಿಕೊಂಡ ಈ ಫುಟ್ಬಾಲ್ ಆಟಗಾರರು ಮೈ ಕೂಡ ಮುಚ್ಚಿಕೊಂಡರೆ ಚೆನ್ನ ಎಂದು ಅಲ್ಲಿಯ ವಸ್ತುಸಂಗ್ರಹಾಲಯ ನೀಟಾಗಿ ಎಲ್ಲಿ ಬೇಕೋ ಅಲ್ಲಿ ಕೆಂಪು ಟೇಪ್ ಅಂಟಿಸಿ, ಡೇಂಜರ್ ಝೋನ್ ಯಾವುದು ಎಂಬ ಸಂದೇಶ ರವಾನಿಸಿದೆ. ನಮ್ಮ ಕ್ಷೇತ್ರಕ್ಕೆ ಕಾಲಿಟ್ಟು ಪೈಪೋಟಿ ನೀಡಿದರೆ ಇದೇ ಗತಿ ಎಂದು ನಟಿಯರು, ಮಹಿಳಾ ರೂಪದರ್ಶಿಗಳು ಖುಷಿಗೊಂಡಿರಬಹುದು.

ಕನಸು ಕಾಣುವುದು ಎಲ್ಲಿಯವರೆಗೆ? ಹೆಚ್ಚೆಂದರೆ ನೂರು ವರ್ಷಗಳ ಕಾಲ ಬಾಳಬೇಕು ಎಂಬಲ್ಲಿಯವರೆಗೆ. ಆದರೆ ಆ ವಯಸ್ಸಿನಲ್ಲೂ ಮಕ್ಕಳು ಪಡೆಯುವ ಕನಸು ಕಾಣುವುದೆಂದರೆ.. ಹರ್ಯಾಣಾದ ರಾಮ್ ಜಿತ್ ರಾಘವ್ ಪಾಲಿಗೆ ಇದು ನನಸಾಗಿದೆ. 96ನೇ ವಯಸ್ಸಿನಲ್ಲಿ ಎರಡನೇ ಬಾರಿ ಅಪ್ಪ ಆಗಿರುವ ಈತನಿಗೆ ಎರಡು ವರ್ಷಗಳ ಹಿಂದೆ ಹುಟ್ಟಿದ ಮಗನಿದ್ದಾನೆ. ತನ್ನ ಈ ಗೆಲುವನ್ನು ಹಾಲು, ಬೆಣ್ಣೆ, ಬಾದಾಮಿಗೆ ಸಮರ್ಪಿಸಿದ್ದು, ಇವುಗಳಿಗೆ ಬೇಡಿಕೆ ಹೆಚ್ಚಾದರೆ ಮುದಿ ವಯಸ್ಸಿನಲ್ಲಿ ಪೇರೆಂಟ್ ಆದ ಈತ ಇವುಗಳ ಪೇಟೆಂಟ್‌ಗಾಗಿ ಅರ್ಜಿ ಸಲ್ಲಿಸಬಹುದು.

ಆಗಷ್ಟೇ ಗರ್ಲ್‌ಫ್ರೆಂಡ್ ಕೈಕೊಟ್ಟಿದ್ದರಿಂದ ಅಮೆರಿಕಾದ ಮೆಸಾಚುಸೆಟ್ಸ್‌ನ ಸಂದೀಪ್ ಸಿಂಗ್ 'ದೇವ್‌ದಾಸ್' ಪೋಸ್ ಕೊಡುತ್ತಿದ್ದ. ಆಗ ಚಂದ್ರಮುಖಿಯಂತೆ ಸಿಕ್ಕಿದ್ದು 30.5 ದಶಲಕ್ಷ ಡಾಲರ್ (ಅಂದಾಜು 158 ಕೋಟಿ ರೂಪಾಯಿ) ಬಂಪರ್ ಲಾಟರಿ. ಕುಟುಂಬದ ಖರ್ಚು ನೀಗಿಸಲು ಎರಡೆರಡು ಉದ್ಯೋಗ ಮಾಡುತ್ತಿದ್ದ ಸಂದೀಪ್ ಈಗ ಲಾಟರಿಯ ಎಲ್ಲಾ ಹಣವನ್ನು ಕುಟುಂಬಕ್ಕೆ ಕೊಡುತ್ತಾನಂತೆ. ಅಂದರೆ ಕೈಕೊಟ್ಟ ಗರ್ಲ್‌ಫ್ರೆಂಡ್‌ಗೆ ಮತ್ತೆ ಕೈಚಾಚುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.




ಅಮೆರಿಕನ್ನರಲ್ಲಿ ಬೊಜ್ಜು ಒಂದೇ ಸಮನೆ ಏರುತ್ತಿದೆ. ತಮ್ಮ ಸಾಕುಪ್ರಾಣಿಗಳನ್ನೂ ದುಂಡಗೆ ಬೆಳೆಸಿ ತಮ್ಮ ದೇಹಗಳಿಗೆ ಮ್ಯಾಚಿಂಗ್ ಮಾಡಿಕೊಂಡವರು ಬಹಳ ಮಂದಿ. ಒಡೆಯ ಮಾತ್ರ ಜಿಮ್‌ಗೆ ತೆರಳಿ ಸ್ಲಿಂ ಆಗಿ ಮಿಸ್‌ಮ್ಯಾಚಿಂಗ್ ಆಗಿಬಿಟ್ಟರೆ.. ಅದಕ್ಕೇ ಅಲ್ಲಿಯ ಕಂಪೆನಿಯೊಂದು ಈ ಸಾಕುಪ್ರಾಣಿಗಳಿಗೂ 'ಮನಿಪೇಸರ್' ಎಂಬ ಟ್ರೆಡ್‌ಮಿಲ್ ತಂದು 'ಮನಿ' ಮಾಡಲು ಹೊರಟಿದೆ. ತಮ್ಮ ತೂಕ ಇಳಿಯದಿದ್ದರೂ ಈ ಮುದ್ದುಪ್ರಾಣಿಗಳು ಒಡೆಯನ ಪರ್ಸ್ ತೂಕ ಇಳಿಸುವುದಂತೂ ಗ್ಯಾರಂಟಿ.



ಮದುವೆಯಾದ ನಂತರ ಕೆಲವು ಸಮುದಾಯಗಳಲ್ಲಿ ಇದು ಮಾಮೂಲು ಎಂದು ಮೂಗು ಮುರಿಯಬೇಡಿ. ಲಿಮಾದಲ್ಲಿರುವ ಜೈಲಿನ ಒಳಗಿನ ದೃಶ್ಯವಿದು. ಇಲ್ಲಿರುವವರೆಲ್ಲಾ ಭಯಂಕರ ಕೊಲೆಗಾರರು, ದರೋಡೆಕೋರರು. ಜೈಲಿನ ಒಳಗೂ ಹೊಡೆದಾಟ ಮಾಮೂಲಂತೆ. ಆದರೆ ಹೊರಗಿನವರಿಗಿಂತ ಒಳಗಿರುವವರಿಗೇ ಅಧಿಕ ಸ್ವಾತಂತ್ರ್ಯವಿದೆಯಂತೆ. ಹೊರಗಿನ ಜಗತ್ತನ್ನು ಅಣಕಿಸುವ ಹಾಗೆ ಜೈಲಿನೊಳಗಡೆ ದೊಡ್ಡ ನಗರವನ್ನೇ ಕಟ್ಟಿಕೊಂಡು, ಮಾಲ್, ಸಿನಿಮಾ ಮಂದಿರ ಎಂದೆಲ್ಲಾ ಆರಾಮವಾಗಿದ್ದಾರಂತೆ. ಈಗಾಗಲೇ ಈ ಜೈಲಿನಲ್ಲಿ 8,500 ಕೈದಿಗಳಿದ್ದು, ಎಂಟ್ರಿ ಪಡೆಯಲು ದೊಡ್ಡ ಕ್ಯೂ ಇರಬಹುದು.



ದಕ್ಷಿಣ ಕೊರಿಯಾದ ರ್ಯಾಪ್ ಡಾನ್ಸರ್ ಪಿಎಸ್‌ವೈನ 'ಗ್ಯಾಂಗ್‌ನಮ್' ಶೈಲಿಯ ನೃತ್ಯ ಅಂತರ್‌ಜಾಲದಲ್ಲೀಗ ಭಾರೀ ಜನಪ್ರಿಯ. ಐಸಿಸಿ ಟಿ20 ಕಪ್ ಗೆದ್ದ ಕೂಡಲೇ ವೆಸ್ಟ್ ಇಂಡೀಸ್ ಕ್ರಿಕೆಟ್ ಆಟಗಾರರೂ ಈ ರೀತಿ ಕುಣಿದು ಹುಚ್ಚೆಬ್ಬಿಸಿದರು. ಇದೀಗ ರೊಬಾಟ್‌ಗಳೂ ಇದೇ ಶೈಲಿ ಅನುಕರಿಸಿ ಕುಣಿಯುತ್ತಿದ್ದು, 'ರೊಬಾಟ್ ಇರುವಾಗ ವೈ ಪಿಎಸ್‌ವೈ?' ಎಂದು ಕೇಳಿವೆಯಂತೆ. ಇದು ಪೈಪೋಟಿ ಯುಗ. ಸವಾಲು ಎಲ್ಲಿಂದ, ಯಾರಿಂದ ಬೇಕಾದರೂ ಬರಬಹುದು.